ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಕರ್ನಾಟಕ, ಭಾರತ
ಸಂಪುಟ 2 ಸಂಚಿಕೆ 2
ಆಗಸ್ಟ್ 2020

# ಫ್ಲೈಯಿಂಗ್ ಫಿಶ್

ಬಿಯಾಂಡ್ ಹಾರಿಝೂನ್...

ಈ ಸಂಪುಟದಲ್ಲಿ ಜೂನ್ ನಿಂದ ಆಗಸ್ಟ್ 2020 ರ ತ್ರೈಮಾಸಿಕದಲ್ಲಿ ಮಂಗಳೂರಿನ ಮೀನುಗಾರಿಕಾ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕೈಗೊಂಡ ಚಟುವಟಿಕೆಗಳು, ಕಾರ್ಯಕ್ರಮಗಳು ಮತ್ತು ಘಟನೆಗಳನ್ನು ಉಲ್ಲೇಖಿಸಲಾಗಿದೆ.

## ಪರಿವಿಡಿ

ಆರೋಗ್ಯ, ಪರಿಸರ ಮತ್ತು ಮೀನುಗಾರಿಕೆ 2
ಚಟುವಟಿಕೆಗಳು 3
ಗಣ್ಯರ ಸಂದೇಶ 4









## ಸಂದೇಶ



**ಡಾ. ಶೈಲೇಶ್ ನಾಯಕ್**
ನಿರ್ದೇಶಕರು
ಸುಧಾರಿತ ಅಧ್ಯಯನಗಳ ರಾಷ್ಟ್ರೀಯ ಸಂಸ್ಥೆ
ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ
ಬೆಂಗಳೂರು, ಕರ್ನಾಟಕ.

ಮೀನುಗಾರಿಕ ಮಹಾವಿದ್ಯಾಲಯವು ತ್ರೈಮಾಸಿಕ ಸುದ್ದಿ ಪತ್ರವನ್ನು ಹೊರತರುತ್ತಿದೆ. ಇದು ಕಾಲೇಜಿನ ವಿವಿಧ ಚಟುವಟಿಕೆಗಳನ್ನು ಮತ್ತು ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕಾ ಸಂಸ್ಥೆಗಳು/ ಇಲಾಖೆಯು ಕೈಗೊಂಡ ಬೆಳವಣಿಗೆಗಳು/ಉಪಕ್ರಮಗಳನ್ನು ತೋರಿಸುತ್ತದೆ. ವಿಶ್ವಾದ್ಯಂತ ಪ್ರಸಾರವಾಗುವ ಈ ಸುದ್ದಿ ಪತ್ರದ ಆವೃತ್ತಿಗೆ ಮುನ್ನುಡಿ ನೀಡಲು ನನಗೆ ಸಾಧ್ಯವಾಗಿದೆ ಎಂಬುದು ನನ್ನ ಪುಣ್ಯ. ಮೀನುಗಾರಿಕಾ ಮಹಾವಿದ್ಯಾಲಯವು 1969ರಲ್ಲಿ ಸ್ಥಾಪನೆಯಾಗಿದ್ದು, ಸಂಶೋಧನೆ, ಅಭಿವೃದ್ಧಿ, ಶಿಕ್ಷಣ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ನಡೆಸುತ್ತಿದೆ. ಇದು ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲದೆ ಇಡೀ ದೇಶಕ್ಕೂ ಪ್ರಯೋಜವನ್ನು ನೀಡಿದೆ.ಕಳೆದ 50 ವರ್ಷಗಳಿಂದ ಕಾಲೇಜು ಪ್ರಾರಂಭವಾದಾಗಿನಿಂದ ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಮತ್ತು ಪಿಎಚ್‌ಡಿ ಪದವಿ ಪಡೆದ ಅಧಿಕ ಮೀನುಗಾರಿಕೆ ಮತ್ತು ಜಲ ವಿಜ್ಞಾನಿಗಳನ್ನು ಈ ವಿದ್ಯಾಲಯವು ಹೊರತಂದಿರುತ್ತದೆ. ಕಾಲೇಜಿನಲ್ಲಿ ಸಂಶೋಧನಾ ವಿಭಾಗವು ತುಂಬಾ ಸಕ್ರಿಯವಾಗಿದೆ ಮತ್ತು ಕಾಲೇಜು 4 ಆರ್ಥಿಕ ವೈವಿಧ್ಯಮಯ ಮೀನುಗಳನ್ನು ಅಭಿವೃದ್ಧಿ ಪಡಿಸಿದೆ. ಕಾಲೇಜು ಜಲಚರ ಸಾಕಣೆಗೆ ಹೊಸ ತಂತ್ರಜ್ಞಾನವನ್ನು ಸ್ಥಾಪಿಸಿದೆ. ಇದಲ್ಲದೆ, ಕಾಲೇಜಿನ ಮೀನು ಸಂಸ್ಕರಣಾ ಮತ್ತು ಎಂಜಿನಿಯರಿಂಗ್ ವಿಭಾಗಗಳು ಅತ್ಯುತ್ತಮವಾಗಿದ್ದು,ಅಲ್ಲಿ ಮೀನುಗಳ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತದೆ/ಅಭಿವೃದ್ಧಿಪಡಿಸಲಾಗುತ್ತದೆ. ಪ್ರಸ್ತುತ ಮಾರಣಾಂತಿಕ ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಮಾರುಕಟ್ಟೆ ಪ್ರದೇಶಗಳನ್ನು ಮುಚ್ಚಿರುವುದರಿಂದ ರೈತರು ಮತ್ತು ಮೀನುಗಾರಿಕೆ ಸಮುದಾಯಗಳಲ್ಲಿ ಸಂಕಟವನ್ನು ಸೃಷ್ಟಿಸಿವೆ. ಕರ್ನಾಟಕ ರಾಜ್ಯವು ಸುಮಾರು 320 ಕಿ.ಮೀ ಕರಾವಳಿಯ ತೀರಪ್ರದೇಶ ಮತ್ತು 8000 ಹೆಕ್ಟೇರ್ ಉಪ್ಪು ನೀರನ್ನು ಹೊಂದಿದೆ. ಉಪ್ಪುನೀರಿನ ಜೊತೆಗೆ ಈ ವಿಶಾಲವಾದ ಕರಾವಳಿಯು ಸಮುದ್ರ ಮತ್ತು ನದಿಮುಖ ಮೀನುಗಾರಿಕೆಗೆ ಹೆಸರುವಾಸಿಯಾಗಿದೆ. ಇದಲ್ಲದೆ, ಹಲವಾರು ಜಲಾಶಯಗಳು, ಕೊಳಗಳು, ಸರೋವರಗಳು, ಕೆರೆಗಳು ಮತ್ತು 20ಕ್ಕೂ ಹೆಚ್ಚು ನದಿಗಳನ್ನು ಒಳಗೊಂಡಿರುವ ವಿಶಾಲ ಒಳನಾಡಿನ ಜಲಸಂಪನ್ಮೂಲಗಳಿಂದ ರಾಜ್ಯವು ಆಶೀರ್ವದಿಸಲ್ಪಟ್ಟಿದೆ. ಕೇಂದ್ರ ಸರ್ಕಾರದ ಇತ್ತೀಚೆಗೆ ಪ್ರಾರಂಭಿಸಲಾದ ಪ್ರಮುಖ ಯೋಜನೆಯಾದ "ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ" ಯಡಿ ಒಳನಾಡು ಸಮುದ್ರ ತೀರದ ಹಿನ್ನೀರು ಮತ್ತು ಸಮುದ್ರದಲ್ಲಿ ಮೀನುಕೃಷಿಗೆ ಸಾಕಷ್ಟು ಅವಕಾಶವನ್ನು ಒದಗಿಸುತ್ತದೆ.

ಹವಾಮಾನ ವೈಪರೀತ್ಯದ ದುಷ್ಪರಿಣಾಮಗಳನ್ನು ತಗ್ಗಿಸಲು ಮೀನುಗಾರಿಕಾ ಕ್ಷೇತ್ರಕ್ಕೆ ಹೊಂದಾಣಿಕೆಯ ಕಾರ್ಯತಂತ್ರವನ್ನು ಸಿದ್ಧಪಡಿಸುವುದಕ್ಕಾಗಿ ಮೀನುಗಾರಿಕಾ ಮಹಾವಿದ್ಯಾಲಯವನ್ನು ರಾಜ್ಯ ಸರ್ಕಾರವು ನೋಡಲ್ ಏಜೆನ್ಸಿಯಾಗಿ ಗುರುತಿಸಿದೆ ಎಂದು ತಿಳಿದು ನನಗೆ ಸಂತೋಷವಾಗಿದೆ. ಮಹಾವಿದ್ಯಾಲಯವು ಇದರ ವರದಿಯನ್ನು ಸಿದ್ಧಪಡಿಸಿ ರಾಜ್ಯಸರ್ಕಾರಕ್ಕೆ ಸಲ್ಲಿಸಿದೆ. ಆ ವರದಿಯನ್ನು ರಾಜ್ಯ ಸರ್ಕಾರವು ಅಂಗೀಕರಿಸಿದೆ. ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಮತ್ತು ಮೀನುಗಾರಿಕೆ ಸಮುದಾಯಗಳಿಗೆ ಜೀವನೋಪಾಯ ಭದ್ರತೆಗಳನ್ನು ಒದಗಿಸುವಂತಹ ವರದಿಯನ್ನು ಸಿದ್ಧಪಡಿಸಿದೆ. ವರದಿಯನ್ನು ಆಧರಿಸಿ ಕಾಲೇಜಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಅಗತ್ಯ ಹಣವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ನನಗೆ ಖಾತ್ರಿಯಿದೆ. ಈ ಸಂಸ್ಥೆಯನ್ನು ದೇಶದ ಅತ್ಯಂತ ಪ್ರಸಿದ್ಧ ವೈಜ್ಞಾನಿಕ ಸಂಶೋಧನೆ ಮತ್ತು ಶೈಕ್ಷಣಿಕ ಸಂಸ್ಥೆಯಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸಹಾ ಮೀನುಗಾರಿಕಾ ಮಹಾವಿದ್ಯಾಲಯಕ್ಕೆ ಎಲ್ಲಾ ಸಹಾಯವನ್ನು ನೀಡುತ್ತಿದೆ. ಮುಂಬರುವ ಭವಿಷ್ಯದಲ್ಲಿ ಸುವರ್ಣ ಮಹೋತ್ಸವದ ಯಶಸ್ಸನ್ನು ಕಾಣಲಿ ಎಂದು ಆಶಿಸುತ್ತೇನೆ.

ದಿನಾಂಕ: 24ಆಗಸ್ಟ್,2020
ಸ್ಥಳ : ಮಂಗಳೂರು

ಶೈಲೇಶ್ ನಾಯಕ್

## ಸಂದೇಶ



**ಹೆಚ್.ಡಿ.ನಾರಾಯಣ ಸ್ವಾಮಿ**
ಉಪ ಕುಲಪತಿಗಳು ಕ.ಪ.ಪ.ಮೀ.ವಿ.ವಿ

ಫ್ಲೈಯಿಂಗ್ ಫಿಶ್ ತ್ರೈಮಾಸಿಕವನ್ನು ಹೊರತರುವಲ್ಲಿಮೀನುಗಾರಿಕೆ ಮಹಾ ವಿದ್ಯಾಲಯ ಮಂಗಳೂರು ಇದರ ಪಾತ್ರ ಅತ್ಯಂತ ಪ್ರಶಂಸನಿಶನೀಯ. ಈ ಸುದ್ದಿಪತ್ರ ಆರೋಗ್ಯ, ಪರಿಸರ ಮತ್ತು ಮೀನುಗಾರಿಕೆ ಇತ್ಯಾದಿ ಕಾಲೇಜು ಚಟುವಟಿಕೆಗಳನ್ನು ಎತ್ತಿ ತೋರಿಸುತ್ತದೆ. ಮೀನುಗಾರಿಕಾ ಕಾಲೇಜನ್ನು ನೀವೆಲ್ಲರೂ ತಿಳಿದಿರುವ ಹಾಗೆ ಮೀನುಗಾರಿಕಾ ಕ್ಷೇತ್ರದಲ್ಲಿ ಮೀನುಗಾರಿಕಾ ಶಿಕ್ಷಣ ತಜ್ಞರನ್ನು ಒದಗಿಸುವ ಪ್ರಧಾನ ಸಂಸ್ಥೆಯಾಗಿ 1969 ರಲ್ಲಿ ಮಂಗಳೂರು ಸ್ಥಾಪನೆಯಾದ ಮೊದಲ ಸಂಸ್ಥೆ. ಅಂದಿನಿಂದ ಕಾಲೇಜಿನಲ್ಲಿ ಉತ್ತಮ ಗುಣಮಟ್ಟದ ಮೀನುಗಾರಿಕಾ ಪದವೀಧರರು, ಸ್ನಾತಕೋತ್ತರ ಪದವೀಧರರು ಮತ್ತು ಪಿಎಚ್ಡಿಗಳನ್ನು ರಾಷ್ಟ್ರೀಯವಾಗಿ ಮಾತ್ರವಲ್ಲದೆ ಅಂತರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ತಜ್ಞರು, ಸಂಶೋಧಕರು, ನೀತಿ ನಿರೂಪಕರು, ಮೀನುಗಾರಿಕೆ ಕ್ಷೇತ್ರದ ಉದ್ಯಮಿಗಳನ್ನು ಹೊರತಂದಿದ್ದಾರೆ. ಕಾಲೇಜಿನಲ್ಲಿ ಅತ್ಯುತ್ತಮವಾದ ಶೈಕ್ಷಣಿಕ ವಿಭಾಗಗಳಿವೆ, ಸಂಪೂರ್ಣ ತಂತ್ರಜ್ಞಾನ ವಿಭಾಗವನ್ನು ಹೊಂದಿದೆ, ಇದನ್ನು ಕೈಗಾರಿಕಾ ಮಟ್ಟದಲ್ಲಿ ಅತ್ಯಾಧುನಿಕ, ಪ್ರಯೋಗಾಲಯಗಳು ಮತ್ತು ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸೌಲಭ್ಯಗಳನ್ನು ಒದಗಿಸಬಹುದು. ಜಿಮ್ನಾಷಿಯಂ, ಈಜುಕೊಳ, ಆಟದ ಮೈದಾನಗಳು ಇವೆಲ್ಲವೂ ಹಚ್ಚ ಹಸಿರಿನಿಂದ ಕೂಡಿದ ಪರಿಸರದಲ್ಲಿವೆ . ಮೀನುಗಾರಿಕಾ ಕಾಲೇಜಿನ ವಿದ್ಯಾರ್ಥಿಗಳಿಗೆ ಎಲ್ಲಾ ಅವಕಾಶಗಳು ಮತ್ತು ಕೌಶಲ್ಯಗಳನ್ನು ಒದಗಿಸಲಾಗಿದ್ದು, ಇದರಿಂದ ಅವರು ಮೀನುಗಾರಿಕೆ ಅಭಿವೃದ್ಧಿ ಕ್ಷೇತ್ರದಲ್ಲಿ ಉದ್ಯಮಶೀಲತೆಯನ್ನು ಹೊಂದಬಹುದು. ಮೀನುಗಾರಿಕಾ ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಕೆಲವು ಸಾಧನೆಗಳನ್ನು ಎತ್ತಿ ಹಿಡಿಯಲು ಸುದ್ದಿಪತ್ರವು ಒಂದು ಮಾಧ್ಯಮವನ್ನು ಒದಗಿಸುತ್ತದೆ.

ಹೆಚ್.ಡಿ.ನಾರಾಯಣ ಸ್ವಾಮಿ

# ಆರೋಗ್ಯ, ಪರಿಸರ ಮತ್ತು ಮೀನಿಗಾರಿಕೆ

## ಮೀನುಗಾರಿಕಾ ಮಹಾವಿದ್ಯಾಲಯದ ಸುವರ್ಣ ಮಹೋತ್ಸವದ ನೆನಪಿಗಾಗಿ ಅಂಚೆ ಚೀಟಿ ಬಿಡುಗಡೆ : 30.06.2020



ಕರ್ನಾಟಕ ರಾಜ್ಯವು ಹಲವಾರು ಸ್ಥಳೀಯ ಸಸ್ಯ ಮತ್ತು ಪ್ರಾಣಿಗಳನ್ನು ಹೊಂದಿದೆ. ಪಶ್ಚಿಮ ಘಟ್ಟಗಳು ಪ್ರಪಂಚದ ಜೈವಿಕ ವೈವಿಧ್ಯತೆಯ ತಾಣಗಳಲ್ಲಿ ಒಂದು ಮತ್ತು ಇದು ಹಲವಾರು ಸಸ್ಯ ಮತ್ತು ಪ್ರಾಣಿಗಳಿಗೆ ನೆಲೆಯಾಗಿದೆ. ಪಂಟಿಯಸ್ ಕಾರ್ನಾಟಿಕಸ್ ಎಂಬುದು ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ ಕಂಡುಬರುವ ಒಂದು ಮೀನು ಪ್ರಭೇದವಾಗಿದೆ. ಸೂಕ್ಷ್ಮ ಸ್ಥಳೀಯ ಮೀನುಗಳ ಬಗ್ಗೆ ಸಂರಕ್ಷಣಾ ಜಾಗೃತಿ ಮೂಡಿಸಲು ಒಂದು ಅಂಚೆ ಚೀಟಿ ಮತ್ತು ಮೀನಿನ ಚಿತ್ರವನ್ನು ಹೊಂದಿರುವ ಮೊದಲ ಮುಖಪುಟವನ್ನು ಭಾರತ ಸರ್ಕಾರದ ಭಾರತೀಯ ಅಂಚೆ ಇಲಾಖೆ ಮುದ್ರಿಸಿದೆ. ಅಂಚೆಚೀಟಿ ಮತ್ತು ಮೊದಲ ಮುಖಪುಟವನ್ನು ಕರ್ನಾಟಕ ಸರ್ಕಾರದ ಮೀನುಗಾರಿಕೆ, ಬಂದರುಗಳು ಮತ್ತು ಒಳನಾಡಿನ ಜಲಸಾರಿಗೆ ಸಚಿವ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು, ಮಂಗಳೂರು ದಕ್ಷಿಣದ ಶಾಸಕ ಶ್ರೀ. ವೇದವ್ಯಾಸ ಕಾಮತ್, ಶ್ರೀ. ದಿವಾಕರ್ ಪಾಂಡೇಶ್ವರ್, ಮೇಯರ್, ಶ್ರೀಮತಿ ವೇದಾವತಿ, ಉಪಮೇಯರ್, ಹೊಯ್ಗೆ ಬಜಾರ್ ವಾರ್ಡ್‌ನ ಕಾರ್ಪೋರೇಟರ್ ಶ್ರೀಮತಿ ರೇವತಿ ಶ್ಯಾಂಸುಂದರ್, ಎಂಎಸ್ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಶ್ರೀ. ಮೊಹಮ್ಮದ್ ನಜೀರ್ ಮತ್ತು ಮಂಗಳೂರು ನಗರ ನಿಗಮದ ಜಿಲ್ಲಾ ಪಂಚಾಯತ್, ಮೀನುಗಾರಿಕಾ ಮಹಾವಿದ್ಯಾಲಯದ ಸಿಬ್ಬಂದಿ ಮತ್ತು ಎಂಎಸ್ಸಿಎಲ್ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಬಿಡುಗಡೆ ಮಾಡಿದರು.

## ಮೀನುಗಾರಿಕಾ ಮಹಾವಿದ್ಯಾಲಯದ ತಾಂತ್ರಿಕ ಅಂಗದಲ್ಲಿ ನಡೆದ "ಮೀನುಗಾರಿಕೆಯಲ್ಲಿ ಕೌಶಲ್ಯ ಅಭಿವೃದ್ಧಿ ಮತ್ತು ಸುರಕ್ಷತಾ ತರಬೇತಿ ಕೇಂದ್ರದ" ಭೂಮಿ ಪೂಜೆ : 30.06.2020





"ಮೀನುಗಾರಿಕೆಯಲ್ಲಿ ಕೌಶಲ್ಯ ಅಭಿವೃದ್ಧಿ ಮತ್ತು ಸುರಕ್ಷತಾ ಕೇಂದ್ರದ" ನಿರ್ಮಾಣಕ್ಕಾಗಿ ಭೂಮಿ ಪೂಜೆಯು 30.06.2020ರಂದು ಮೀನುಗಾರಿಕಾ ಮಹಾವಿದ್ಯಾಲಯದ ಹೊಯ್ಗೆ ಬಜಾರ್ ಕ್ಯಾಂಪಸ್‌ನಲ್ಲಿರುವ ತಾಂತ್ರಿಕ ವಿಭಾಗದಲ್ಲಿ ನಡೆಯಿತು. ಈ ಸಮಾರಂಭದಲ್ಲಿ ಮೀನುಗಾರಿಕೆ, ಬಂದರು ಮತ್ತು ಒಳನಾಡಿನ ಜಲಸಾರಿಗೆ ಸಚಿವ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಂಗಳೂರು ದಕ್ಷಿಣದ ಶಾಸಕರಾದ ಶ್ರೀ ವೇದವ್ಯಾಸ ಕಾಮತ್ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು. ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ (ಎಂಎಸ್ಸಿಎಲ್) ಕೇಂದ್ರವನ್ನು 4.75 ಕೋಟಿ ಅಂದಾಜು ವೆಚ್ಚದೊಂದಿಗೆ ಸ್ಥಾಪಿಸುತ್ತಿದೆ ಮತ್ತು 2020ರ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಒಮ್ಮೆ ಸ್ಥಾಪನೆಯಾದ ಕೇಂದ್ರವು ಕೌಶಲ್ಯ ಅಭಿವೃದ್ಧಿಯ ತರಬೇತಿ ಕಾರ್ಯಕ್ರಮಗಳನ್ನು ಒದಗಿಸುವ ನಿಟ್ಟಿನಲ್ಲಿ ಅತ್ಯಾಧುನಿಕ ಸೌಲಭ್ಯವನ್ನು ಸೃಷ್ಟಿಸುತ್ತದೆ. ಮಹಿಳೆಯರು, ನಿರುದ್ಯೋಗಿ ಯುವಕರು ಮತ್ತು ಇತರ ಸಮುದಾಯಗಳು ಸೇರಿದಂತೆ ಮೀನುಗಾರ ಸಮುದಾಯಕ್ಕೆ ತರಬೇತಿ, ತಾಂತ್ರಿಕ ಕೌಶಲ್ಯ ಮತ್ತು ಜ್ಞಾನವನ್ನು ನೀಡಲು ಮೀನುಗಾರಿಕಾ ಮಹಾವಿದ್ಯಾಲಯವು ನೋಡಲ್ ಕೇಂದ್ರವಾಗಿರುತ್ತದೆ.

## ಸಂಶೋಧನಾ ಪ್ರಬಂಧಗಳು, ಸುವರ್ಣ ಮಹೋತ್ಸವದ ವಿಚಾರಗೋಷ್ಠಿಯ ಸಾರಾಂಶಗಳು ಮತ್ತು "ಫ್ಲೈಯಿಂಗ್ ಫಿಶ್" (ಹಾರುವ ಮೀನು) ಸುದ್ದಿಪತ್ರಗಳ ಬಿಡುಗಡೆ.



ಮೀನುಗಾರಿಕಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ

ಕಳೆದ ಐದು ವರ್ಷಗಳಲ್ಲಿ (2015–20) ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಲಾದ ಮೀನುಗಾರಿಕಾ ಮಹಾವಿದ್ಯಾಲಯದ ಸಂಶೋಧನೆ ಮತ್ತು ವಿಸ್ತರಣಾ ಪ್ರಬಂಧಗಳನ್ನು ಒಳಗೊಂಡಿರುವ ಒಂದು ಸಂಗ್ರಹದ ಗ್ರಂಥವನ್ನು ಹೊರತಂದಿದೆ. ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ನಡೆದ ಸಮಾರಂಭದಲ್ಲಿ ಮೀನುಗಾರಿಕೆ, ಬಂದರುಗಳು ಮತ್ತು ಒಳನಾಡಿನ ಜಲ ಸಾರಿಗೆ ಸಚಿವ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಮತ್ತು ಹಲವಾರು ಗಣ್ಯರು ಈ ಗ್ರಂಥವನ್ನು ಬಿಡುಗಡೆ ಮಾಡಿದರು. "ಸಮಗ್ರ ಕರಾವಳಿ ವಲಯ ನಿರ್ವಹಣೆಯಲ್ಲಿ ಮೀನುಗಾರಿಕೆ ಸಮುದಾಯದ ಕಳವಳಗಳನ್ನು ಪರಿಹರಿಸುವುದು ಉದಯೋನ್ಮುಖ ಸವಾಲು" ಎಂಬ ಶೀರ್ಷಿಕೆಯ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಸಂಬಂಧಿಸಿದ ಸಾರಾಂಶ ಪುಸ್ತಕ ಮತ್ತು ಅದೇ ಸಂದರ್ಭದಲ್ಲಿ "ಫ್ಲೈಯಿಂಗ್ ಫಿಶ್" (ಹಾರುವ ಮೀನು) ಎಂಬ ಸುದ್ದಿ ಪತ್ರದ ತ್ರೈಮಾಸಿಕ ಆವೃತ್ತಿಯನ್ನು ಬಿಡುಗಡೆ ಮಾಡಲಾಯಿತು.

## ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ 2020

ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆಯ ಸಂದರ್ಭದಲ್ಲಿ "ಜಲಕೃಷಿ ಪರ್ಯಾಯ ಜೀವನೋಪಾಯ ಮತ್ತು ವ್ಯಾಪಾರ ಅವಕಾಶಗಳು" ಎಂಬ ವೆಬಿನಾರ್ ಅನ್ನು ದಿನಾಂಕ 10 ಜುಲೈ, 2020ರಂದು ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯವು ಮತ್ತು ಮೀನುಗಾರಿಕೆ ಇಲಾಖೆಯ ಸಹಯೋಗದಿಂದ ಆಯೋಜಿಸಿತು. ವೆಬಿನಾರ್ ಅನ್ನು ಶ್ರೀ ಕೋಟಾ ಶ್ರೀನಿವಾಸ ಪೂಜಾರಿ, ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡಿನ ಸಾರಿಗೆ ಸಚಿವರು ಉದ್ಘಾಟಿಸಿದರು ಮತ್ತು ಮೀನುಗಾರಿಕಾ ಮಹಾವಿದ್ಯಾಲಯದ ಜಲಪರಿಸರ ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಡಾ. ಶಿವಕುಮಾರ್ ಎಂ. ಇವರು ಆತಿಥ್ಯ ವಹಿಸಿದ್ದರು. ವೆಬಿನಾರ್‌ನಲ್ಲಿ ಶ್ರೀ. ರಾಮಕೃಷ್ಣ, ಮೀನುಗಾರಿಕಾ ನಿರ್ದೇಶಕರು ಹಾಗೂ ಶ್ರೀ. ರಾಮಚಾರ್ಯ, ಮೀನುಗಾರಿಕೆ ಇಲಾಖೆ ಮತ್ತು ಪ್ರಖ್ಯಾತ ಮೀನುಗಾರಿಕೆ ವಿಜ್ಞಾನಿಗಳು ಭಾಗವಹಿಸಿದ್ದರು. ತಜ್ಞರಲ್ಲಿ ಡಾ. ಡಿ. ಸೀನಪ್ಪ, ಜಲಕೃಷಿ ತಜ್ಞ, ಡಾ. ಅಜಾದ್ ಇಸ್ಮಾಯಿಲ್, ಮೀನುಗಾರಿಕೆ ವಿಜ್ಞಾನಿ, ಕುವೈತ್, ಪ್ರಗತಿಪರ ಮೀನು ಮತ್ತು ಸೀಗಡಿ ಕೃಷಿಕರಾದ ಡಾ. ಮನೋಜ್ ಶರ್ಮಾ, ಶ್ರೀ ಸನ್ನಿ ಡಿಸೋಜಾ, ಶ್ರೀ ಜಗದೀಶ್ ನಿಂಗಪ್ಪ, ಶ್ರೀ ನೀಲಕಂಠ ಮಿಶ್ರಾ, ಡಾ. ರಾಮಯ್ಯ, ಡಾ.ಸಿ.ಕೆ. ಮೂರ್ತಿ ಮತ್ತು ಮೀನುಗಾರಿಕಾ ಮಹಾವಿದ್ಯಾಲಯದ ಸಿಬ್ಬಂದಿಗಳು ಸೇರಿ ವೆಬಿನಾರ್‌ನಲ್ಲಿ 100ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

## 2019ರಲ್ಲಿ ಕರಾವಳಿ ಜಿಲ್ಲೆಗಳ ಪ್ರವಾಹ ಮೌಲ್ಯಮಾಪನ ನಡೆಸಿದ ಮೀನುಗಾರಿಕಾ ಕಾಲೇಜು



2019ರ ಮಳೆಗಾಲದಲ್ಲಿ ಕರ್ನಾಟಕದ ಕರಾವಳಿ ತೀರಪ್ರದೇಶಗಳು ಭಾರೀ ಮಳೆಯಿಂದಾಗಿ ತೀವ್ರ ಪ್ರವಾಹ ಮತ್ತು ಭಾರೀ ಹಾನಿಯನ್ನು ಕಂಡವು. ದಕ್ಷಿಣ ಕನ್ನಡದಲ್ಲಿ ಜಾನುವಾರು ಮತ್ತು ಮೀನುಗಾರಿಕೆಗೆ ಆಗಿರುವ ಹಾನಿಯನ್ನು ಅಂದಾಜಿಸಲು ಮೀನುಗಾರಿಕಾ ಮಹಾವಿದ್ಯಾಲಯದ ಸಿಬ್ಬಂದಿಗಳು 5 ತಂಡಗಳಲ್ಲಿ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ ತಾಲ್ಲೂಕು ಹಾಗೂ ಕ್ರಮವಾಗಿ 3 ತಂಡಗಳು ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳ ವಿವಿಧ ತಾಲ್ಲೂಕುಗಳಿಗೆ ಭೇಟಿ ನೀಡಿತು. ಸದರಿ ಕೆಲಸವನ್ನು ಪಶುಸಂಗೋಪನಾ ಇಲಾಖೆಯೊಂದಿಗೆ ಸಮನ್ವಯದಿಂದ ಮಾಡಿದೆ. ತಂಡಗಳ ವಿವರವಾದ ಮೌಲ್ಯಮಾಪನ ವರದಿ ಮತ್ತು ಶಿಫಾರಸುಗಳನ್ನು ಕಾಲೇಜು ವಾರಕ್ಕೊಮ್ಮೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ (ಕಪಪಮೀವಿವಿ) ಸಲ್ಲಿಸಿತು.

### ಪ್ರಮುಖ ಶಿಫಾರಸುಗಳು ಸೇರಿವೆ.

1) ಶಾಶ್ವತ ಕುಡಿಯುವ ನೀರು ಮತ್ತು ಪಶುಸಂಗೋಪನೆ ಸೌಲಭ್ಯಗಳ ಸ್ಥಾಪನೆ.
2) ಪೀಡಿತ ಜಾನುವಾರಗಳಿಗೆ ಚಿಕಿತ್ಸೆ ನೀಡಲು ಪಶುವೈದ್ಯಕೀಯ, ಪಶು ಮತ್ತು ಪಶುಸಂಗೋಪನಾ ಇಲಾಖೆಗೆ ಪ್ರಾಣಿಗಳ ತುರ್ತುವಾಹನವನ್ನು ಅಗತ್ಯವಿರುವ ಎಲ್ಲಾ ಸೌಲಭ್ಯಗಳೊಂದಿಗೆ ಒದಗಿಸಬಹುದು.
3) ವಿಪತ್ತುಗಳ ಸಮಯದಲ್ಲಿ ಕುಟುಂಬಗಳ ನಡುವೆ ವಿತರಣೆಗಾಗಿ ಸಿದ್ಧವಾಗಿರುವ ಪೌಷ್ಠಿಕ ಮತ್ತು ಶಕ್ತಿಯ ಸಮೃದ್ಧಿಯ ಆಹಾರವನ್ನು ತಯಾರಿಸುವ ಮತ್ತು ಪ್ಯಾಕೇಜಿಂಗ್ ಮಾಡುವ ಕೆಲಸವನ್ನು ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) ಮತ್ತು ಡಿಎಫ್‌ಆರ್‌ಎಲ್‌ಗಳಿಗೆ ನಿಯೋಜಿಸಬಹುದು.
4) ವೇಗವಾಗಿ ಬೆಳೆಯುವ ಸಸ್ಯಗಳನ್ನು ಎಲ್ಲಾ ಸವೆತ/ಭೂಕುಸಿತ ಪ್ರದೇಶಗಳಲ್ಲಿ ನೆಡುವ ಮೂಲಕ ಸೂಕ್ತ ಕೈತೋಟಗಳನ್ನು ಕೈಗೊಳ್ಳಬೇಕು.
5) ಸ್ವಯಂ ಸೇವಕರು ಕಾಲೇಜುಗಳಲ್ಲಿ ನೋಂದಾಯಿಸಿಕೊಂಡು, ಅವರಿಗೆ ವಿಪತ್ತು ಸಂದರ್ಭಗಳನ್ನು ನಿಭಾಯಿಸುವ ಬಗ್ಗೆ ಸೂಕ್ತ ತರಬೇತಿ ನೀಡಬೇಕು.

# ಚಟುವಟಿಕೆಗಳು

## ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ (ಪಿಎಂಎಂಎಸ್‌ವೈ) "ಮೀನುಗಾರಿಕೆ ಅಭಿವೃದ್ಧಿಯಲ್ಲಿ ಆತ್ಮನಿರ್ಭರ್ ಸ್ವಾವಲಂಬನೆ"

ಸಮುದ್ರ ಮೀನುಗಾರಿಕೆ ಮತ್ತು ಒಳನಾಡು ಜಲಕೃಷಿ ಭಾರತದಲ್ಲಿ ಉದ್ಯೋಗ ಮತ್ತು ಆದಾಯದ ಪ್ರಮುಖ ಮೂಲವಾಗಿದೆ. ಈ ವಲಯವು 25 ದಶಲಕ್ಷಕ್ಕೂ ಹೆಚ್ಚು ಮೀನುಗಾರರು ಮತ್ತು ಮೀನು ಕೃಷಿಕರಿಗೆ ಜೀವನೋಪಾಯವನ್ನು ಒದಗಿಸುತ್ತದೆ. ಭಾರತದಲ್ಲಿ ಮೀನು ಉತ್ಪಾದನೆಯು ಕಳೆದ 5 ವರ್ಷಗಳಲ್ಲಿ ಸರಾಸರಿ 7.53% ನಷ್ಟು ಬೆಳವಣಿಗೆಯನ್ನು ದಾಖಲಿಸಿದೆ ಮತ್ತು 2018–19ರ ಅವಧಿಯಲ್ಲಿ ಸಾರ್ವಕಾಲಿಕ ಗರಿಷ್ಠ 13.58 ಲಕ್ಷ ಮೆಟ್ರಿಕ್ ಟನ್‌ಗಳಷ್ಟಿದೆ. ಮೀನುಗಾರಿಕೆಯ ಅಭಿವೃದ್ಧಿಗೆ ಅಪಾರ ಸಾಮರ್ಥ್ಯವಿದೆ ಎಂದು ಗುರುತಿಸಲಾಗಿದೆ. ಈ ವಲಯದ ಬಗ್ಗೆ ಕೇಂದ್ರೀಕೃತ ಗಮನವನ್ನು ನೀಡುವ ಸಲುವಾಗಿ ಸರ್ಕಾರವು ತನ್ನ ಕೇಂದ್ರ ಬಜೆಟ್‌ನಲ್ಲಿ ಪ್ರಧಾನ್ ಮಂತ್ರಿ ಮತ್ಸ್ಯ ಸಂಪದ ಯೋಜನೆ (ಪಿಎಂಎಂಎಸ್‌ವೈ) ಎಂಬ ಹೊಸ ಯೋಜನೆಯನ್ನು ಪ್ರಕಟಿಸಿದೆ. ಈ ಯೋಜನೆಯು 2022–23ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಸರ್ಕಾರದ ಉದ್ದೇಶಕ್ಕೆ ಅನುಗುಣವಾಗಿದೆ. ಪ್ರಧಾನ ಮಂತ್ರಿ ಮತ್ಸ್ಯ ಸಂಪದಕ್ಕೆ ರೂ. 20,050 ಕೋಟಿ ಹೂಡಿಕೆಗೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ಕೇಂದ್ರದ ಪಾಲು ರೂ. 9,407 ಕೋಟಿ, ರಾಜ್ಯ ಪಾಲು ರೂ. 4,880 ಕೋಟಿ ಮತ್ತು ಫಲಾನುಭವಿಗಳ ಕೊಡುಗೆ ರೂ. 563 ಕೋಟಿ.

ಕರ್ನಾಟಕ ರಾಜ್ಯದಲ್ಲಿ 9.74 ಲಕ್ಷ ಮೀನುಗಾರರಿದ್ದಾರೆ (ಒಳನಾಡಿನಲ್ಲಿ 6.46 ಲಕ್ಷ ಅಂದರೆ 66% ಮತ್ತು ಸಮುದ್ರ ಕಿನಾರೆಯಲ್ಲಿ 3.28 ಲಕ್ಷ ಅಂದರೆ 44%) ಅದರಲ್ಲಿ 2.96 ಲಕ್ಷ (ಒಳನಾಡಿನಲ್ಲಿ 1.39 ಲಕ್ಷ ಅಂದರೆ 47% ಮತ್ತು ಸಮುದ್ರ ಕಿನಾರೆಯಲ್ಲಿ 1.57 ಲಕ್ಷ ಅಂದರೆ 53%) ನಷ್ಟು ಜನರು ಸಕ್ರೀಯರಾಗಿದ್ದಾರೆ.

ದೇಶದ ಒಟ್ಟು ಉತ್ಪನ್ನಕ್ಕೆ ಮೀನುಗಾರಿಕಾ ವಲಯದ ಕೊಡುಗೆ 1993–94ರಲ್ಲಿ 163.16 ಕೋಟಿಯಿತ್ತು ಮತ್ತು ಇದು 2018–19ರಲ್ಲಿ 6,996 ಕೋಟಿಗೆ ಏರಿದೆ. ಕರ್ನಾಟಕವು ಒಳನಾಡಿನ ಜಲಮೂಲಗಳು ಮತ್ತು ಉಪ್ಪುನೀರಿನ ಪ್ರದೇಶಗಳು ಅಪಾರ ಲಭ್ಯತೆಯನ್ನು ಹೊಂದಿದ್ದರೂ ಸಹಾ ಅವುಗಳ ಪೂರ್ಣ ಸಾಮರ್ಥ್ಯಕ್ಕೆ ಬಳಸಲ್ಪಟಿಲ್ಲ, ಆದ್ದರಿಂದ, ಸಂಪನ್ಮೂಲಗಳ ಬಳಕೆ ಮತ್ತು ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಪಿಎಂಎಂಎಸ್‌ವೈ ಅನುಷ್ಠಾನಗೊಳಿಸುವ ಮೂಲಕ ಮಾಡಬಹುದಾಗಿದೆ. ಇದು ಈ ಕೆಳಗಿನ ಕಾರ್ಯತಂತ್ರಗಳೊಂದಿಗೆ ಸಮಸ್ಯೆಗಳನ್ನು ಪರಿಹರಿಸುತ್ತದೆ. ಪಿಎಂಎಂಎಸ್‌ವೈ ಅಡಿಯಲ್ಲಿ ಧನಸಹಾಯಕ್ಕಾಗಿ ಯೋಜನಾ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕೇಂದ್ರಸರ್ಕಾರಕ್ಕೆ ಸಲ್ಲಿಸಿದೆ. ಮೀನುಗಾರಿಕಾ ಕಾಲೇಜು ಕರ್ನಾಟಕದ ಮೀನುಗಾರಿಕೆಗೆ ಸಂಬಂಧಿಸಿದ ಕೆಲವು ಯೋಜನೆಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಮತ್ತು ಕರ್ನಾಟಕ ಸರ್ಕಾರದ ಮೀನುಗಾರಿಕಾ ಇಲಾಖೆಗೆ ಸಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

### ಅಕ್ವಾಕಲ್ಚರ್ (ಜಲಕೃಷಿ)

- ಜಲಕೃಷಿಯಡಿಯಲ್ಲಿ ವ್ಯಾಪ್ತಿಯನ್ನು ವಿಸ್ತರಿಸುವುದು
- ಬಳಕೆಯಾಗದ/ಕಡಿಮೆ ಬಳಕೆಯಾದ ಜಲಸಂಪನ್ಮೂಲ ವೃದ್ಧಿಸುವುದು
- ವೈಜ್ಞಾನಿಕ ನಿರ್ವಹಣೆ ಮತ್ತು ಸಂಭಾರ ಆಧಾರಿತ ಮೀನುಕೃಷಿಗೆ ಆದ್ಯತೆ ನೀಡುವುದು.

### ಜಲಾಶಯಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ

- ಸುಸ್ಥಿರ ಮೀನು ಉತ್ಪಾದನೆಗಾಗಿ ಜಲಾಶಯಗಳ ಸಹ–ನಿರ್ವಹಣೆ ಮತ್ತು ಜಲಾಶಯಗಳ ಪರಿಧಿಯಲ್ಲಿ ವಾಸಿಸುವ ಸಮುದಾಯಗಳ ಜೀವನೋಪಾಯವನ್ನು ಖಾತ್ರಿಪಡಿಸಿಕೊಳ್ಳುವಲ್ಲಿ ಹೆಚ್ಚಿನ ಒತ್ತು ನೀಡುವುದು.

### ಮೀನುಮರಿಗಳ ಉತ್ಪಾದನೆ

- ಸಂತಾನೋತ್ಪತ್ತಿ ಮಾಡಲು ತಳೀಯವಾಗಿ ಉನ್ನತ ಪ್ರಭೇದಗಳ ಮತ್ತು ತಳಿ ಸುಧಾರಣೆಗೆ ರಾಜ್ಯಮಟ್ಟದ ಬ್ರೂಡ್‌ಬ್ಯಾಂಕ್ ಸ್ಥಾಪನೆ.
- ಅಸ್ತಿತ್ವದಲ್ಲಿರುವ ರಾಜ್ಯ ಮೀನು ಮರಿ ಉತ್ಪಾದನೆ ಮತ್ತು ಸಾಕಣೆ ಕೇಂದ್ರಗಳ ನವೀಕರಣ.
- ಖಾಸಗಿ ವಲಯದ ಅಡಿಯಲ್ಲಿ ಮರಿ ಪಾಲನೆ ಕೃಷಿಗೆ ಪ್ರೋತ್ಸಾಹ
- ತಿಲಾಪಿಯಾ, ಪಂಗಾಸಿಯಸ್, ಮುರ್ರೆಲ್, ಸಿಹಿನೀರಿನ ಸೀಗಡಿ ಮತ್ತು ಇತರ ಅನುಮೋದಿತ ಜಾತಿಗಳ ಮರಿಗಳನ್ನು ಪೂರೈಸಲು ಮೀನುಮರಿ ಸಾಕಾಣೆ ಕೇಂದ್ರಗಳ ಸ್ಥಾಪನೆ.

### ಉಪ್ಪುನೀರಿನಲ್ಲಿ ಮೀನುಗಾರಿಕೆ

- ಪ್ರಸ್ತುತ ರಾಜ್ಯದಲ್ಲಿ ಹಿನ್ನೀರಿನ ಮೀನು ಮರಿ ಉತ್ಪಾದನಾ ಕೇಂದ್ರಗಳಿಲ್ಲ. ಇದರ ಪರಿಣಾಮವಾಗಿ, ರಾಜ್ಯಗಳ ಮೀನು ರೈತರು ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ಕೇರಳ ಮತ್ತು ಗುಜರಾತ್‌ನಲ್ಲಿನ ಮೀನು ಸಾಕಾಣೆ ಕೇಂದ್ರಗಳನ್ನು ಅವಲಂಬಿಸಿದ್ದಾರೆ. ಈ ಅಂಶಗಳ ದೃಷ್ಟಿಯಿಂದ ಮೀನು ಸಾಕಾಣೆ ಕೇಂದ್ರವನ್ನು ಸ್ಥಾಪಿಸುವ ಅಗತ್ಯವಿದೆ.

### ಮೂಲಸೌಕರ್ಯ ಮತ್ತು ಮೀನು ಮಾರಾಟ

- ಪ್ರಮುಖ ಮೆಟ್ರೋ ನಗರಗಳು ಮತ್ತು ಎರಡು ನಗರಗಳನ್ನು ಕೇಂದ್ರೀಕರಿಸುವ ಆಧುನಿಕ ಮತ್ತು ಆರೋಗ್ಯಕರ ಮೀನು ಕಿಯೋಸ್ಕ್ ಸರಪಳಿಯನ್ನು ಸ್ಥಾಪಿಸಲು ಬೆಂಬಲವನ್ನು ವಿಸ್ತರಿಸಬೇಕಿದೆ.
- ಆರೋಗ್ಯಕರ ಮತ್ತು ಸ್ವಚ್ಛವಾದ ಮೀನು ಮಾರುಕಟ್ಟೆಗಳ ಸ್ಥಾಪನೆಗೆ ಖಾಸಗಿ ಸಹಭಾಗಿತ್ವದೊಂದಿಗೆ ಹೆಚ್ಚಿನ ಅನುಕೂಲ ಕಲ್ಪಿಸಬೇಕಾಗಿದೆ.
- ಮಾರುಕಟ್ಟೆ ದುರ್ಬಲತೆಗಳನ್ನು ಕಡಿಮೆ ಮಾಡಲು ಜಲಚರ ಸಾಕಣೆ ಚಟುವಟಿಕೆಗಳಲ್ಲಿ ಖಾಸಗಿ ಹೂಡಿಕೆಯನ್ನು ಪ್ರೋತ್ಸಾಹಿಸಲಾಗುತ್ತದೆ.
- ಅಲಂಕಾರಿಕ ಮೀನು ಉತ್ಪಾದನೆ ಮತ್ತು ಮಾರುಕಟ್ಟೆ, ಕ್ರೀಡಾ ಮೀನುಗಾರಿಕೆ (ಶಿಕಾರಿ), ಸಣ್ಣ ಮೀನುಗಾರಿಕೆ ವಿಸ್ತರಣೆ ವ್ಯವಸ್ಥೆ ಮತ್ತು ತರಬೇತಿ, ಮೀನುಗಾರಿಕೆ ನಿರ್ವಹಣೆ ಮತ್ತು ಕಲ್ಯಾಣವನ್ನು ಪ್ರೋತ್ಸಾಹಿಸುವುದು. ಮಂಗಳೂರು ಮೀನುಗಾರಿಕಾ ಕಾಲೇಜು, ಮಂಗಳೂರು ತಂತ್ರಜ್ಞಾನ ಉನ್ನತೀಕರಣ, ಅಭಿವೃದ್ಧಿ ಚಟುವಟಿಕೆಗಳಲ್ಲಿ ಮತ್ತು ಪೈಲಟ್ ಯೋಜನೆಗಳನ್ನು ತಯಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

# ಗಣ್ಯರ ಸಂದೇಶ



## ಶ್ರೀ. ಕೋಟ ಶ್ರೀನಿವಾಸ ಪೂಜಾರಿ

**ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ ಸಚಿವರು**

1969ರಲ್ಲಿ ಮಂಗಳೂರಿನಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪನೆಯಾದ ಮೀನುಗಾರಿಕಾ ಕಾಲೇಜು 50 ವರ್ಷಗಳನ್ನು ಪೂರೈಸುತ್ತಿರುವುದು ಒಂದು ಭಾಗ್ಯ ಮತ್ತು ಗೌರವವಾಗಿದೆ. ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲಿಯೂ ಮೀನುಗಾರಿಕೆ ಸಮುದಾಯಗಳ ಉನ್ನತಿಗಾಗಿ ಅಗತ್ಯವಾದ ನೆರವು ನೀಡುವಲ್ಲಿ ಕಾಲೇಜು ಉತ್ತಮ ಕೊಡುಗೆ ನೀಡುತ್ತಿದೆ. ಏಷ್ಯಾದ ಮೊದಲ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ, ದೇಶದ ಹಲವು ರಾಜ್ಯ ಸರ್ಕಾರಗಳು ಮಂಗಳೂರಿನ ಮೀನುಗಾರಿಕಾ ಮಹಾವಿದ್ಯಾಲಯದ ಶೈಕ್ಷಣಿಕ ರಚನೆಯ ಪ್ರಕಾರ ಆಯಾ ರಾಜ್ಯಗಳಲ್ಲಿ ಮೀನುಗಾರಿಕಾ ಕಾಲೇಜುಗಳನ್ನು ಸ್ಥಾಪಿಸಿವೆ.

ಮೀನುಗಾರಿಕಾ ಕ್ಷೇತ್ರ ಜನರಿಗೆ ಉದ್ಯೋಗ ಅವಕಾಶ ಒದಗಿಸುತ್ತದೆ. ರಾಷ್ಟ್ರೀಯ ಆರ್ಥಿಕತೆ ಮತ್ತು ಪೌಷ್ಠಿಕಾಂಶಕ್ಕೆ ಗಮನಾರ್ಹವಾಗಿ ಕೊಡುಗೆ ನೀಡುತ್ತದೆ. ಆದಾಗ್ಯೂ, ಮೀನುಗಾರಿಕೆ ವಲಯವು ಮೀನುಗಳ ದಾಸ್ತಾನಿಗೆ ಹಾನಿ ಉಂಟು ಮಾಡುವ ಗಂಭೀರ ಪ್ರತಿಕೂಲ ಸಮಸ್ಯೆಗಳನ್ನು ಎದುರಿಸುತ್ತಿದೆ. ಮಾಲಿನ್ಯ, ದೊಡ್ಡ ಪ್ರಮಾಣದ ಆವಾಸಸ್ಥಾನ ನಾಶ, ಅಸಮರ್ಥನೀಯ ಮೀನುಗಾರಿಕೆ ಸೇರಿದಂತೆ ಹವಾಮಾನ ಬದಲಾವಣೆಯ ಪರಿಣಾಮ ಮೀನು ಮಾತ್ರವಲ್ಲದೆ ಮೀನುಗಾರಿಕೆ ಸಮುದಾಯಗಳ ಮೇಲೂ ಪರಿಣಾಮ ಬೀರುತ್ತದೆ.

ಕೋವಿಡ್–19 ಸಾಂಕ್ರಾಮಿಕ ರೋಗವು ಮೀನುಗಾರಿಕೆ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಸಾಂಪ್ರದಾಯಿಕ ಮೀನುಗಾರಿಕೆಯನ್ನು ಹೊರತುಪಡಿಸಿ ಸಮುದ್ರ ಮೀನುಗಾರಿಕೆ ಬಹುತೇಕ ನಿಂತುಹೋಗಿದೆ. ಸಿಹಿನೀರಿನ ಪ್ರದೇಶಗಳಲ್ಲಿನ ಜಲಕೃಷಿ ಮತ್ತು ಮೀನುಗಾರಿಕೆ ಮೇಲೆಯೂ ಕೂಡ ಗಂಭೀರ ಪರಿಣಾಮ ಬೀರಿದೆ.

ಹಿಡಿದ ಮೀನುಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯವಿಲ್ಲ ಮತ್ತು ಆದ್ದರಿಂದ ಮೀನುಗಾರರು ಹೆಚ್ಚು ತೊಂದರೆಗೀಡಾಗಿದ್ದಾರೆ. ಈ ಸಮಯದಲ್ಲಿ ಮೀನುಗಾರಿಕೆ ಕ್ಷೇತ್ರವನ್ನು ಬಲಪಡಿಸಲು ಭಾರತ ಸರ್ಕಾರ ಮುಂದೆ ಬಂದಿದೆ. ಮಾನ್ಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು "ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ" ಯನ್ನು ಪ್ರಾರಂಭಿಸಿದ್ದಾರೆ. ಇದಕ್ಕೆ ಕರ್ನಾಟಕ ಸರ್ಕಾರವು ಅತ್ಯಂತ ಕೃತಜ್ಞವಾಗಿದೆ. ಭಾರತ ಸರ್ಕಾರದ ಈ ಉಪಕ್ರಮವು ಮೀನುಗಾರಿಕೆ ಸಮುದಾಯಗಳಿಗೆ ಪರ್ಯಾಯ ಜೀವನೋಪಾಯವನ್ನು ರಾಜ್ಯದಲ್ಲಿ ಮೀನುಗಾರಿಕೆಯನ್ನು ಅನ್ವೇಷಿಸಲು ಮತ್ತು ಉತ್ತೇಜಿಸಲು ಸಹಾಯ ಮಾಡುತ್ತದೆ. ಕರ್ನಾಟಕ ರಾಜ್ಯವು ಮೀನುಗಾರಿಕೆಯಲ್ಲಿ ಪ್ರಮುಖ ರಾಜ್ಯಗಳಲ್ಲಿ ಒಂದಾಗುವ ದೊಡ್ಡ ಸಾಮರ್ಥ್ಯವನ್ನು ಹೊಂದಿದೆ. ಮಂಗಳೂರಿನ ಮೀನುಗಾರಿಕಾ ಕಾಲೇಜಿನ ಪ್ರಾಧ್ಯಾಪಕರು ಲಾಕ್‌ಡೌನ್ ಸಮಯದಲ್ಲಿ ಸಾಂಪ್ರದಾಯಿಕ ಮೀನು ಕೃಷಿಕರಿಗೆ ತಾಂತ್ರಿಕ ನೆರವು ನೀಡುತ್ತಿದ್ದಾರೆ. ಇದಲ್ಲದೇ ಕರ್ನಾಟಕ ಸರ್ಕಾರಕ್ಕೆ "ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ"ಯಡಿ ಸಹಾಯ ಮಾಡುವ ಮೂಲಕ ಕರ್ನಾಟಕದಲ್ಲಿ ಮೀನುಗಾರಿಕೆ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವಲ್ಲಿ ಕಾಲೇಜು ಪ್ರಮುಖ ಪಾತ್ರವಹಿಸುತ್ತಿದೆ. ಎಲ್ಲಾ ಮೀನುಗಾರಿಕಾ ಸಮುದಾಯಗಳು ಮತ್ತು ಮೀನುಗಾರಿಕಾ ಕಾಲೇಜಿನ ನೌಕರರು ಸುರಕ್ಷತೆ ಮಾನದಂಡಗಳನ್ನು ಅಳವಡಿಸಿಕೊಳ್ಳಲು ಮತ್ತು ಸುರಕ್ಷಿತವಾಗಿರಲು ಬಯಸುತ್ತೇನೆ. ಕಾಲೇಜಿನ ಫ್ಲೈಯಿಂಗ್ ಫಿಶ್– ತ್ರೈಮಾಸಿಕ ಪ್ರಕಟಿತ ನಿಯತಕಾಲಿಕವು ಮೀನುಗಾರಿಕೆಯ ಮೇಲೆ ಕೋವಿಡ್–19 ರ ಪ್ರಭಾವಕ್ಕೆ ಅನುಗುಣವಾಗಿ ರಾಜ್ಯದ ಮೀನುಗಾರಿಕೆಯ ಅಭಿವೃದ್ಧಿಯ ಇತ್ತೀಚಿನ ಮಾಹಿತಿಯನ್ನು ಒದಗಿಸುತ್ತದೆ ಎಂದು ಖಚಿತವಾಗಿದೆ. ಈ ಪ್ರಯತ್ನದಲ್ಲಿ ಕಾಲೇಜಿನ ವೈಜ್ಞಾನಿಕ ಸಮುದಾಯಗಳನ್ನು ವಿಶೇಷವಾಗಿ ಪ್ರಾಧ್ಯಾಪಕರ ದಣಿವರಿಯದ ಸೇವೆಗಳಿಗಾಗಿ ನಾನು ಅಭಿನಂದಿಸುತ್ತೇನೆ.

ದಿನಾಂಕ: 26.05.2020



## ಶ್ರೀ ನಳಿನ್ ಕುಮಾರ್ ಕಟೀಲ್

**ಮಾನ್ಯ ಸಂಸದರು ಮತ್ತು ಬಿಜೆಪಿ ರಾಜ್ಯಾಧ್ಯಕ್ಷರು**

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇದರ ಅಂಗಸಂಸ್ಥೆಯಾದ ಮಂಗಳೂರಿನ ಮೀನುಗಾರಿಕಾ ಕಾಲೇಜು, ಸ್ಥಾಪನೆಯ 50ನೇ ವರ್ಷದಲ್ಲಿದೆ ಮತ್ತು ಈ ವರ್ಷ ತನ್ನ ಸುವರ್ಣಮಹೋತ್ಸವವನ್ನು ಆಚರಿಸುತ್ತಿದೆ ಎಂದು ಕೇಳಿದಾಗ ನನಗೆ ಅತೀವ ಸಂತೋಷವಾಗಿದೆ. ಈ ಸಂಸ್ಥೆಯು ದೇಶದ ಅತ್ಯುತ್ತಮ ಕಾಲೇಜುಗಳಲ್ಲಿ ಒಂದಾಗಿ ತನ್ನ ಹೆಸರನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದೆ ಎಂಬುದು ಹೆಮ್ಮೆಯ ಕ್ಷಣವಾಗಿದೆ. ನಾನು ಕಳೆದ ಒಂದು ದಶಕದಿಂದ ಕಾಲೇಜಿನೊಂದಿಗೆ ನಿಕಟ ಸಂಬಂಧ ಹೊಂದಿದ್ದೇನೆ. ಪಶ್ಚಿಮ ಘಟ್ಟದ ಈ ಅತ್ಯಂತ ಸುಂದರವಾದ ಪ್ರದೇಶದಲ್ಲಿ ಈ ಕಾಲೇಜನ್ನು 1969 ರಲ್ಲಿ ಸ್ಥಾಪಿಸಲಾಯಿತು. ಜಪಾನ್ ಸರ್ಕಾರವು 1960ರ ದಶಕದಲ್ಲಿ ಅದರ ಸ್ಥಾಪನೆಗೆ ಎಲ್ಲಾ ಸಹಾಯವನ್ನು ನೀಡಿತ್ತು. ಕಾಲಾನಂತರದಲ್ಲಿ, ಕಾಲೇಜು ಒಂದು ಸಂಸ್ಥೆಯಾಗಿ ಅಭಿವೃದ್ಧಿ ಹೊಂದಿದ್ದು, ಜಲಚರ ಸಾಕಣೆ ಮತ್ತು ಸಮುದ್ರ ಮೀನುಗಾರಿಕೆ ಕ್ಷೇತ್ರದಲ್ಲಿ ಪ್ರಮುಖ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಕೈಗೊಂಡಿದೆ. ಮೀನುಕೃಷಿ ಕ್ಷೇತ್ರದ ತಂತ್ರಜ್ಞಾನಗಳನ್ನು ರೈತರಿಗೆ ವರ್ಗಾಯಿಸಲು ಕಾಲೇಜು ಯಶಸ್ವಿಯಾಗಿದೆ.

ಕಾಲೇಜಿನ ಮೀನುಗಾರಿಕೆ ಸಂಪನ್ಮೂಲಗಳ ವಿಭಾಗ, ಜಲಪರಿಸರ ಮತ್ತು ಆರೋಗ್ಯ ನಿರ್ವಹಣೆ ವಿಭಾಗಗಳು ವಿಜ್ಞಾನವನ್ನು ಉತ್ತೇಜಿಸುವ ಮತ್ತು ಈ ಪ್ರದೇಶದ ಸ್ಥಳೀಯ ಸಮುದಾಯಗಳ ಅಗತ್ಯತೆಗಳನ್ನು ತಿಳಿಸುವ ಕ್ಷೇತ್ರದಲ್ಲಿ ಮಹತ್ತರವಾದ ಕಾರ್ಯವನ್ನು ನಿರ್ವಹಿಸುತ್ತಿವೆ.

ಹೊಯ್ಗೆ ಬಜಾರ್‌ನಲ್ಲಿರುವ ಕಾಲೇಜಿನ ತಾಂತ್ರಿಕ ವಿಭಾಗವು ಕೆಲವು ಇತ್ತೀಚಿನ ಆಹಾರ ಸಂಸ್ಕರಣಾ ಸಾಧನಗಳನ್ನು ಹೊಂದಿದೆ. ಇದರಲ್ಲಿ ಮೀನು ಮತ್ತು ಚಿಪ್ಪು ಮೀನುಗಳ ವಿವಿಧ ಉತ್ಪನ್ನಗಳಾದ ಸಾಸೇಜ್, ಹೆಪ್ಪುಗಟ್ಟಿದ ಆಹಾರಗಳು ಮತ್ತು ಇತರ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಉತ್ಪನ್ನ ತಯಾರಿಕೆಯ ತಂತ್ರಜ್ಞಾನವನ್ನು ರೈತರು ಮತ್ತು ಸ್ಥಳೀಯ ಸಮುದಾಯಗಳಿಗೆ ಜೀವನೋಪಾಯ ಸುರಕ್ಷತೆ ಮತ್ತು ಉದ್ಯಮಶೀಲತೆ ಅಭಿವೃದ್ಧಿಯಾಗಿ ವರ್ಗಾಯಿಸಬಹುದು.

ಈ ಪ್ರದೇಶದ ಅಭಿವೃದ್ಧಿಯಲ್ಲಿ ಕಾಲೇಜು ಹೆಚ್ಚಿನ ಸಮಯವನ್ನು ವ್ಯಯಿಸುತ್ತಿರುವುದು, ಪ್ರಾಮುಖ್ಯತೆ ಮತ್ತು ನಿರ್ಣಾಯಕ ಪಾತ್ರವನ್ನು ಗಮನದಲ್ಲಿಟ್ಟುಕೊಂಡು, ಕಾಲೇಜಿನ ಹೆಚ್ಚಿನ ಅಭಿವೃದ್ಧಿಗಾಗಿ ನಾನು ಮಾನ್ಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರಲ್ಲಿ ಕೇಳಿಕೊಳ್ಳುತ್ತೇನೆ. ಕಾಲೇಜು ಸಲ್ಲಿಸಿದ ಈ ಯೋಜನೆಗಳನ್ನು ಸಂಬಂಧಿಸಿದ ಇಲಾಖಾ ಸಚಿವಾಲಯಗಳಿಗೆ ತಲುಪಿಸಿ, ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತೇನೆ. ನಾನು ಕಾಲೇಜಿಗೆ ಎಲ್ಲಾ ಯಶಸ್ಸನ್ನು ಬಯಸುತ್ತೇನೆ ಮತ್ತು ಈ ಕಾಲೇಜಿನ ಅಭಿವೃದ್ಧಿಯಲ್ಲಿ ನನ್ನ ಕಡೆಯಿಂದ ಎಲ್ಲಾ ಸಹಾಯವನ್ನು ನೀಡುತ್ತೇನೆ.

ಹವಾಮಾನ ಬದಲಾವಣೆಯ ಪರಿಣಾಮಗಳಿಂದಾಗಿ ಸ್ಥಳೀಯ ಸಮುದಾಯಗಳು ಮತ್ತು ಮೀನುಗಾರರಿಗೆ ಅನಿಶ್ಚಿತತೆಯನ್ನು ನಿಭಾಯಿಸಲು ಸಾಧ್ಯವಾಗುವಂತಹ ಪರ್ಯಾಯ ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಭದ್ರತಾ ಯೋಜನೆಗಳನ್ನು ಈ ನಿಟ್ಟಿನಲ್ಲಿ ಕಾಲೇಜಿನಲ್ಲಿ ಇಎನ್‌ವಿಎಸ್ ಕೇಂದ್ರ, ಜೀವವೈವಿಧ್ಯ ಕೇಂದ್ರ, ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ನನಗೆ ಖಾತ್ರಿಯಿದೆ. ಮಹಾವಿದ್ಯಾಲಯದ ಫ್ಲೈಯಿಂಗ್ ಫಿಶ್ ಸಂಪುಟ 01, ಸಂಚಿಕೆ 03 ಹೆಸರಿನಲ್ಲಿರುವ ಸುದ್ದಿ ಪತ್ರವು ಫಲಾನುಭವಿಗಳಿಗೆ ಸಂಶೋಧನೆ ಮತ್ತು ಬೆಳವಣಿಗೆಗಳ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡುತ್ತವೆ ಎಂದು ನಂಬಿದ್ದೇನೆ.



## ಡೀನ್ ಡೆಸ್ಕ್

ಕೋವಿಡ್ –19ರ ಕಾರಣದಿಂದಾಗಿ ಆರೋಗ್ಯ ಕ್ಷೇತ್ರ, ಕೃಷಿ–ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಹೊರತುಪಡಿಸಿ ಬಹುತೇಕ ಎಲ್ಲಾ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿವೆ/ನಿಧಾನವಾಗಿವೆ. ಲಾಕ್ ಡೌನ್ ಸಮಯದಲ್ಲಿ ಸಹ, ಮೀನುಗಾರಿಕಾ ಕಾಲೇಜಿನ ಸಿಬ್ಬಂದಿ ದಣಿವರಿಯಿಲ್ಲದೆ ಕೆಲಸ ಮಾಡುತ್ತಿದ್ದಾರೆ ಮತ್ತು ಧನಸಹಾಯಕ್ಕಾಗಿ ಸುಮಾರು 25 ಯೋಜನೆ ಪ್ರಸ್ತಾವನೆಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಮೀನುಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಈ ಪ್ರಸ್ತಾವನೆಗಳಿಗೆ ಸಮ್ಮತಿಸಿದ್ದು, ಪಿಎಂಎಂಎಸ್‌ವೈ ಅಡಿಯಲ್ಲಿ ನೆರವು ನೀಡಲು ಮೀನುಗಾರಿಕೆ ಸಚಿವಾಲಯ ಮತ್ತು ಎನ್‌ಎಫ್‌ಡಿಬಿಗೆ ಕಳುಹಿಸಿದೆ. "ಕರ್ನಾಟಕದ ನೀಲಿ ಕ್ರಾಂತಿಯ ತ್ವರಿತ ಮೌಲ್ಯಮಾಪನ" ಎಂಬ ಯೋಜನೆಯ ತಯಾರಿಕೆಯಲ್ಲಿ ಸಿಬ್ಬಂದಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯ ಸಮರ್ಪಣೆಯೊಂದಿಗೆ ಕಾಲೇಜು ಮುಂಬರುವ ಭವಿಷ್ಯದಲ್ಲಿ ಹೆಚ್ಚಿನ ಎತ್ತರವನ್ನು ತಲುಪಲಿದೆ ಎಂದು ನನಗೆ ಖಾತ್ರಿಯಿದೆ.

Citymart: 7795666366

ನಾವು www.cofm.edu.in ವೆಬ್‌ನಲ್ಲಿದ್ದೇವೆ.
ಸಲಹೆಗಳು ಸುದ್ದಿಪತ್ರ, ಮತ್ತು ಪ್ರತಿಕ್ರಿಯೆಗಳಿಗಾಗಿ
cofm.edu.inನ್ನು ಸಂಪರ್ಕಿಸಿ

ಮೀನುಗಾರಿಕಾ ಮಹಾವಿದ್ಯಾಲಯ,
ಎಕ್ಕೂರು, ಕಂಕನಾಡಿ ಪಿ.ಓ., ಮಂಗಳೂರು–575 002
ಫೋನ್–0824–2248936/ 2249256/57/58/59

ಈ–ಸಂಚಿಕೆಗಾಗಿ ಕೋಡನ್ನು ಬಳಸಿ

ಸಂಪಾದಕೀಯ ತಂಡ: ಡಾ.ಮಾಲತಿಶೇಖರ್, ಡಾ. ಅಭಿಮನ್ ಬಿ, ಶ್ರೀಮತಿ ವಂದನಾ ಕೆ., ಶ್ರೀ ಮಂಜುಲೇಶ್ಯೈ, ಕುಮಾರಿ. ಸ್ವಾತಿ,, ಶ್ರೀಮತಿ ರಶ್ಮಿ ಹೆಬ್ಬಾರ್